ಗಂಧದ ಕಡ್ಡಿಯ ವಾಸನೆಗೆ ಥಿಯೇಟರ್ ನಗುತ್ತದೆ. 'ನಮೋ ವೆಂಕಟೇಶ' ಎಂದು ಗುನುಗುತ್ತದೆ. ರಾತ್ರಿಗೂ ಮೊದಲೇ ಈ ಥಿಯೇಟರ್ ಒಳಗೆ ಕತ್ತಲು ಆವರಿಸುತ್ತದೆ. ತೆರೆಯ ಹಿಂದೆ ಅಡಗಿದ್ದ ಪಾತ್ರಗಳು ಧುತ್ತೆಂದು ಆಚೆ ಬರುತ್ತವೆ.

ಸಂಜೆಯನ್ನು ಚಿತ್ರೀಕರಿಸಲು ಮನಸ್ಸು ಮಾಡಿದ ಆ ಡೈರೆಕ್ಟರ್ ವೃತ್ತಾಕಾರದ ಟೋಪಿಯ ಕೆಳಗೆ ಮುಖದ ಮೇಲೆ ಕೋಪ ಕೂರಿಸಿಕೊಂಡು ಕುಣಿಯುತ್ತಾನೆ. ಮುಳುಗುತ್ತಿರುವ ಮುದಿಯನನ್ನು ಹಿಡಿಯಲೆಂಬಂತೆ ಒದ್ದಾಡುತ್ತಾನೆ. ಕಳ್ಳ ಕೊಳ್ಳೆ ಹೊಡೆಯಲು ಯೋಜನೆ ರೂಪಿಸುತ್ತಾನೆ. ರಾತ್ರಿ ವ್ಯವಹಾರಗಳಿಗೆ ಅವನ ಪ್ರಾರ್ಥನೆ ಶುರುವಾಗುತ್ತದೆ. ಭಿಕ್ಷೆ ಸಿಗದ ಜೀವಗಳು ಚೌಟ್ರಿ ಮುಂದಿನ ಕಸದ ಬುಟ್ಟಿಯಲ್ಲಿ ಅನ್ನ ಹುಡುಕುತ್ತಿವೆ. ಎಸಿ ರೂಂನಲ್ಲಿ ಬೆವರುವಂತೆ ಅಲ್ಲೊಬ್ಬ ಬರೀ ಹಣವನ್ನೇ ಕಕ್ಕುತ್ತಾನೆ. ಮನಸ್ಸು ಮಬ್ಬಾಗುತ್ತದೆ. ಕವಿಯೊಬ್ಬ ಏನೋ ಬರೆಯಲು ಕಂಪ್ಯೂಟರ್ ಮುಂದೆ ಕೂತು ಪರದಾಡುತ್ತಿದ್ದಾನೆ.

ಇಲ್ಲಿ ಹಗಲು ಸೋತು ಕೂರುತ್ತದೆ. ಉರಿದ ಸಮಯ ತಣ್ಣಗಾಗುತ್ತದೆ. ನೀರಿನೊಂದಿಗೆ ಜಗಳವಾಡಿಕೊಂಡಿದ್ದ ಗಾಳಿ ಈಗ ಎರಡ್ಮೂರು ಹನಿಯ ಸೆಳೆದುಕೊಂಡು ತಣ್ಣಗೆ ಹಾರುತ್ತದೆ. ಕಂದನಿಗೊಂದು ಟೋಪಿ ಬೀಳುತ್ತದೆ. ಸುಕ್ಕು ಬಿದ್ದ ಚರ್ಮ ನಡುಗುತ್ತದೆ.

ಹಗಲು ದೀರ್ಘ, ರಾತ್ರಿಯೂ ದೀರ್ಘ. ನೋಡಿ ಈ ಸಂಜೆ ಎಂಬುದು ಎಷ್ಟೊಂದು ಅಲ್ಪ. ಇನ್ನೇನು ತಿರುವಿನಲ್ಲಿ ಮರೆಯಾಗಿ ಬಿಡುತ್ತಾಳೇನೊ ಅನ್ನುವ ಹುಡುಗಿ ಥಟ್ಟನೆ ತಿರುಗಿ ನೋಡಿ ಮಾಯಾವಾದಂತೆ ಈ ಸಂಜೆ. ಎರಡೂ ಅಷ್ಟೇ ಅಲ್ಲ! ಕನ್ನಡಿಯಲ್ಲಿ ಎಲ್ಲವೂ ನೇರವಲ್ಲ. ಎಡವು ಬಲವಾಗುತ್ತದೆ, ಬಲವು ಎಡವಾಗುತ್ತದೆ. ಈ ಕನ್ನಡಿಯ ರೂಪದಲ್ಲಿ ಒಂದು ಆರಂಭ ಮತ್ತೊಂದು ಅಂತ್ಯದ ಸುಳಿವಿನ ಮುನ್ಸೂಚನೆ ಅಷ್ಟೇ. ಮಿಲನ ಸುಖದಷ್ಟೇ ಚಂದವಾಗಿ, ಅಲ್ಪಕಾಲದ್ದಾಗಿ ಮುಗಿದು ಹೋಗುತ್ತದೆ ಈ ಸಂಜೆ. ಕಂದನೊಂದು ಜಗಿದು ನುಂಗುವ ಚಾಕಲೇಟ್‌ನಂತೆ ಥಟ್ಟನೆ ಮಾಯಾ! ಆಮೇಲೆ ಬರೀ ಖಾಲಿ ಖಾಲಿ.

ಬೆಳಗು ತನ್ನ ಮುಖವನ್ನು ಬಾನಿನಲ್ಲಿ ನೋಡಿಕೊಂಡಂತೆ ಈ ಸಂಜೆ!

ಅಲ್ಲಿ ಯಾರೋ ಮುಖ ಬಾಡಿಸಿಕೊಂಡು ಕೂತಿದ್ದಾರೆ. ಇಲ್ಲೊಬ್ಬ ಕೂತಲ್ಲಿ ಕೂರದೆ, ನಿಂತಲ್ಲಿ ನಿಲ್ಲದೆ ಪಂಜರದ ಪ್ರಾಣಿಯಂತೆ ಶತಪಥ ಹಾಕುತ್ತಿದ್ದಾನೆ. ಮೊಬೈಲ್ ಕೈಯಲ್ಲಿದೆ. ಅದರ ಬ್ಯಾಟರಿ ಖಾಲಿಯಾಗಿದೆಯಂತೆ. ಬೆಳಗ್ಗೆ ಮಾಡಿದ್ದ ಚಾರ್ಜ್ ತೀರಿದೆ. ಯಾವುದೇ ಕ್ಷಣದಲ್ಲಿ ಅದು ಸ್ವಿಚ್ ಆಫ್ ಆಗಬಹುದು. ನೆಟ್ ಆರಿ ಹೋಗುತ್ತದೆ. ಯಾವಾಗ ಬೇಕಾದರೂ ಈ ಜಗತ್ತಿನ ಜೊತೆ ಅವನ ಸಂಪರ್ಕ ಕಡಿದು ಹೋಗಬಹುದು. ಅವನದು ಅದೇ ಆತಂಕ. ಈ ಜಗತ್ತು ತನ್ನನ್ನು ಏಕಾಏಕಿ ಹೊರಹಾಕಿ ಬಿಡುತ್ತದೋ ಎಂಬ ದಿಗಿಲು.

ಪೇಪರ್ ಹಾಕುವ ಹುಡುಗ ಬೆಳಗ್ಗೆ ಎಸೆದು ಹೋಗಿದ್ದ ಪತ್ರಿಕೆಯ ಆಯಸ್ಸು ಮುಗಿಯುತ್ತಿದೆ. ಅಂಗಡಿಯಲ್ಲಿ ಇಟ್ಟ ಪತ್ರಿಕೆಗಳಲ್ಲಿ ಒಂದಷ್ಟು ಇನ್ನೂ ಉಳಿದಿವೆ. ಅವುಗಳನ್ನು ಯಾರೂ ಓದಿಯೇ ಇಲ್ಲ. ಸಿನಿಮಾ ಪುರವಣಿಯ ಹೊಸ ಹೀರೋಯಿನ್ ಆ ಉಳಿದು ಹೋದ ಪೇಪರ್ ಮೂಲಕ ಯಾರನ್ನು ತಲುಪಬೇಕಿತ್ತೊ ಅವರನ್ನು ತಲುಪಿಯೇ ಇಲ್ಲ.. ಹಗಲು ಆ ಉಳಿದ ಪತ್ರಿಕೆಗಳ ಗರಿಗರಿಯನ್ನು ಬಳಸಿಕೊಳ್ಳಲೇ ಇಲ್ಲ.

ಟಪಾಲು ಗಾಡಿ ಅಂಚೆ ಹೊತ್ತು ಕೊಂಡು ಹೈವೆಯಲ್ಲಿ ಓಡುತ್ತಿದೆ. ಆನ್‌ಲೈನ್‌ನಲ್ಲಿ ಖರೀದಿಸಿದ ವಸ್ತುಗಳು ಯಾವುದೋ ಗೋಡನ್ನಲ್ಲಿ ಯಾರದೋ ಕೈಯಿಂದ ಕೈಗೆ ಬದಲಾಗುತ್ತವೆ. ವಾಹನದಿಂದ ವಾಹನಕ್ಕೆ ಅಲೆಯುತ್ತಿವೆ.

ನಾಳೆ ಡ್ಯೂಟಿ ಇದೆ. ರಜೆ ಇಲ್ಲ. ದೂರದ ಊರಿನಲ್ಲಿ ನೌಕರಿ. ಈ ಸಂಜೆಯೇ ಹೊರಡಬೇಕು. ಮಗ 'ಪಪ್ಪಾ ಹೋಗಬೇಡ' ಅಂತ ಕೈ ಹಿಡಿಯುತ್ತಾನೆ. ಸಂಜೆ ಅಳುತ್ತದೆ. ಅಪ್ಪ ಅಳುವುದಿಲ್ಲ. ಯಾವ ತಂದೆಯೂ ಮಕ್ಕಳ ಮುಂದೆ ಅಳುವುದಿಲ್ಲ.

ಕೈಯಲ್ಲಿ ಕೆಲಸ ಇಲ್ಲ. ದುಡಿಯಬೇಕು. ಬೆಂಗಳೂರು ಕರೆಯುತ್ತಿದೆ. ಸಂಜೆ ಮನೆ ಬಿಟ್ಟರೆ ನಾಳೆ ಬೆಳಗ್ಗೆ ಮೆಜೆಸ್ಟಿಕ್. ಎಲ್ಲೋ ನೌಕರಿ ಹುಡುಕಿಕೊಳ್ಳಬೇಕು. ಅವನು ಹೊರಟು ನಿಲ್ಲುತ್ತಾನೆ. ಅಮ್ಮನ ಕಣ್ಣಲ್ಲಿ

